ದೂರವಾಣಿ ಸಂಖ್ಯೆ : 080-22212343
ಫ್ಯಾಕ್ಸ್ ಸಂಖ್ಯೆ : 080-22278803
Website : https://kptcl.karnataka.gov.in

ಇ-ಮೇಲ್ ವಿಳಾಸ: director.ahr.kptcl@gmail.com

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

ನಿಗಮದ ಗುರುತಿನ ಸಂಖ್ಯೆ (ಸಿ.ಐ.ಎನ್.) : ಯು40109ಕೆಎ1999ಎಸ್‌ಜಿಸಿ025521
ಕಂಪನಿಯ ಅಧಿಕೃತ ಕಛೇರಿ : ನಿಗಮ ಕಾರ್ಯಾಲಯ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು-560 009

---

**ವಿಷಯ:** ಬೆಳಗಾವಿ ಜಿಲ್ಲೆ, ರಾಯಬಾಗ್ ತಾಲ್ಲೂಕು, ಕುಡಚಿ 110ಕೆ.ವಿ. ಉಪಕೇಂದ್ರದ ಆವರಣದಲ್ಲಿ ಹೆಸ್ಕಾಂ ನ ನೂತನ ಉಪವಿಭಾಗ ಕಚೇರಿ ಕಟ್ಟಡ ನಿರ್ಮಿಸಲು ನಿಗಮದ ಜಾಗವನ್ನು ಲೀಸ್ ಆಧಾರದ ಮೇಲೆ ನೀಡುವ ಬಗ್ಗೆ

**ಉಲ್ಲೇಖ:**
1. ಕವಿಪ್ರನಿನಿ/ಬಿ9/4948/04-05 ದಿನಾಂಕ 29/04/2005.
2. ಕವಿಪ್ರನಿನಿ/ಬಿ9/4948/04-05 ದಿನಾಂಕ 26/10/2006.
3. ಅಧೀಕ್ಷಕ ಇಂಜಿನಿಯರ್ (ಸಿವಿಲ್), ನಿಗಮ ಕಾರ್ಯಾಲಯ, ಹೆಸ್ಕಾಂ, ಹುಬ್ಬಳ್ಳಿ ರವರ ಪತ್ರ ಸಂಖ್ಯೆ ಸಿವೈಎಸ್-2210 ದಿನಾಂಕ 02/09/2021.
4. ಕವಿಪ್ರನಿನಿ/ಬಿ9/68288/17-18 ದಿನಾಂಕ 30/10/2021.
5. ಮುಖ್ಯ ಇಂಜಿನಿಯರ್ (ವಿ), ಪ್ರಸರಣ ವಲಯ, ಬಾಗಲಕೋಟೆ ರವರ ಪತ್ರ ಸಂಖ್ಯೆ 4940-43 ದಿನಾಂಕ 10/06/2022.
6. ದಿನಾಂಕ 23/082022 ರಂದು ನಡೆದ 134 ನೇ ಕವಿಪ್ರನಿನಿ ಮಂಡಳಿ ನಿರ್ದೇಶಕರುಗಳ ಸಭೆ ನಡವಳಿಗಳು.

**ಪೀಠಿಕೆ:**

1. ಬೆಳಗಾವಿ ಜಿಲ್ಲೆ, ರಾಯಬಾಗ್ ತಾಲ್ಲೂಕು, ಕುಡಚಿ 110ಕೆ.ವಿ. ಉಪಕೇಂದ್ರದ ಆವರಣದಲ್ಲಿ ಹೆಸ್ಕಾಂ ನ ಉಪವಿಭಾಗ ಕಚೇರಿ ಹಾಲಿ ಇರುವ ಶಾಖಾ ಕಚೇರಿ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಸದರಿ ಕಟ್ಟಡದಲ್ಲಿ ಉಪವಿಭಾಗ ಹಾಗೂ ಶಾಖಾ ಕಚೇರಿಗಳಿಗೆ ಸ್ಥಳಾವಕಾಶ ಕಡಿಮೆ ಇರುವ ಕಾರಣ, ಸದರಿ ಆವರಣದಲ್ಲಿ ನೂತನ ಉಪವಿಭಾಗ ಕಚೇರಿ ಕಟ್ಟಡ ನಿರ್ಮಿಸಲು ಸ್ಥಳಾವಕಾಶ ನೀಡಲು ಹೆಸ್ಕಾಂ ಕೋರಿಕೆ ಸಲ್ಲಿಸಿತ್ತು.

2. ಮುಖ್ಯ ಇಂಜಿನಿಯರ್ (ವಿ), ಪ್ರಸರಣ ವಲಯ, ಬಾಗಲಕೋಟೆ ರವರು ಕುಡಚಿ 110ಕೆ.ವಿ. ಆವರಣದ ನಕಾಶೆಯಲ್ಲಿ ಗುರುತಿಸಿರುವಂತೆ 25 ಮೀ. X 30 ಮೀ. ಅಳತೆಯ ಖಾಲಿ ಜಾಗವನ್ನು ಹೆಸ್ಕಾಂ ಗೆ ಉಪವಿಭಾಗ ಕಚೇರಿ ಕಟ್ಟಡ ನಿರ್ಮಿಸಲು 30 ವರ್ಷಗಳ ಲೀಸ್ ಆಧಾರದ ಮೇಲೆ ನೀಡಲು ಪ್ರಸ್ತಾವನೆ ಸಲ್ಲಿಸಿರುತ್ತಾರೆ. ಸದರಿ ಜಾಗವನ್ನು ನೀಡುವುದರಿಂದ ಕವಿಪ್ರನಿನಿಯ ಅಭಿವೃದ್ಧಿ ಕಾರ್ಯಗಳಿಗೆ ಅಡಚಣೆಯಾಗುವುದಿಲ್ಲವೆಂದು ತಿಳಿಸಿರುತ್ತಾರೆ. ಮುಂದುವರೆದಂತೆ, ಮುಖ್ಯ ಇಂಜಿನಿಯರ್ (ವಿ), (ಯೋ ಮತ್ತು ಸ) ರವರು ಸಹ ಮೇಲಿನ ಪ್ರಸ್ತಾವನೆಗೆ ಸಹಮತ ವ್ಯಕ್ತಪಡಿಸಿರುತ್ತಾರೆ.

3. ಕವಿಪ್ರನಿನಿ ಯ ಒಡೆತನದಲ್ಲಿದ್ದ ಒಟ್ಟಾರೆ ಆಸ್ತಿಯನ್ನು ಪ್ರಸರಣ ಆಸ್ತಿ ಹಾಗೂ ವಿತರಣಾ ಆಸ್ತಿಗಳೆಂದು ವರ್ಗೀಕರಿಸಿದ ನಂತರ, ಎಸ್ಕಾಂ ಗಳಿಗೆ ಅವಶ್ಯವಿರುವ ಕವಿಪ್ರನಿನಿ ಜಾಗವನ್ನು ಹಾಗೂ ಕವಿಪ್ರನಿನಿ ಗೆ ಅವಶ್ಯವಿರುವ ಎಸ್ಕಾಂ ಗಳ ಜಾಗಗಳನ್ನು ಲೀಸ್ ಆಧಾರದ ಮೇಲೆ ನೀಡುವ ಬಗ್ಗೆ, ದಿನಾಂಕ 29/04/2005 ರ ಆದೇಶದಲ್ಲಿ Arms-length arrangement ನ್ನು ಅನುಮೋದಿಸಲಾಗಿದೆ. ಸದರಿ ಆದೇಶದನ್ವಯ, ಕವಿಪ್ರನಿನಿ ಯಿಂದ ಎಸ್ಕಾಂಗಳಿಗೆ ಲೀಸ್ ಆಧಾರದ ಮೇಲೆ ನೀಡುವ ಜಾಗಗಳ ವಾರ್ಷಿಕ ಲೀಸ್ ಮೊತ್ತವನ್ನು ಸಾಂಕೇತಿಕವಾಗಿ ಪ್ರಚಲಿತ ಮಾರ್ಗಸೂಚಿ ಬೆಲೆಯ 0.1% ರಂತೆ ನಿಗದಿಪಡಿಸಬಹುದಾಗಿದ್ದು, ಸದರಿ ಲೀಸ್ ಮೊತ್ತವನ್ನು ಪ್ರತಿ 5 ವರ್ಷಗಳಿಗೊಮ್ಮೆ ಅಂದಿನ ಮಾರ್ಗಸೂಚಿ ಬೆಲೆಯನ್ವಯ ಪರಿಷ್ಕರಿಸಬಹುದಾಗಿರುತ್ತದೆ.

4. ಹೆಸ್ಕಾಂ ನಿಂದ ಬಾಗಲಕೋಟೆ ಪ್ರಸರಣ ವಲಯ ವ್ಯಾಪ್ತಿಯಲ್ಲಿ ಕವಿಪ್ರನಿನಿ ಕಟ್ಟಡಗಳ ಬಾಡಿಗೆ, ನಿರ್ವಹಣೆ ವೆಚ್ಚ, ನೀರು ಸರಬರಾಜು ವೆಚ್ಚ ಹಾಗೂ ಲೀಸ್ ಮೊತ್ತಗಳ ಬಾಕಿ ಮೊತ್ತಗಳನ್ನು ದಿನಾಂಕ 31/03/2022 ರವರೆಗೆ ಪಾವತಿಸಲಾಗಿರುವುದನ್ನು ಮುಖ್ಯ ಇಂಜಿನಿಯರ್ (ವಿ), ಪ್ರಸರಣ ವಲಯ, ಬಾಗಲಕೋಟೆ ರವರು ದೃಢೀಕರಿಸಿಕೊಂಡ ನಂತರ ಪ್ರಸ್ತಾಪಿಸಿರುವ ಜಾಗವನ್ನು ಹೆಸ್ಕಾಂಗೆ ಹಸ್ತಾಂತರಿಸುವ ಪ್ರಸ್ತಾವನೆಯನ್ನು ದಿನಾಂಕ 23/08/2022 ರಂದು ನಡೆದ 134 ನೇ ಕವಿಪ್ರನಿನಿ ಮಂಡಳಿ ನಿರ್ದೇಶಕರುಗಳ ಸಭೆಯಲ್ಲಿ ಮಂಡಿಸಲಾಗಿತ್ತು.

5. ಕವಿಪ್ರನಿನಿ ಮಂಡಳಿ ಸಭೆಯಲ್ಲಿ ಸದರಿ ಪ್ರಸ್ತಾವನೆಯ ಮೇಲೆ ಈ ಕೆಳಕಂಡಂತೆ ನಿರ್ಣಯ ತೆಗೆದುಕೊಳ್ಳಲಾಗಿದೆ.

*RESOLVED THAT approval be and is hereby accorded to spare identified KPTCL land to an extent of 25 X 30 Mtrs in the premises of 110kV station premises at Kudachi, Raibagh Taluk, Belagavi Distreict to HESCOM on lease basis for construction of new subdivision office building in terms of Arms-length arrangement between KPTCL and ESCOMs vide order No. KPTCL/B9/4948/04-05 dated 29/04/2005 and subject to ascertaiinig that HESCOM has cleared all the outstanding dues towards rental charges, maintenance charges, water supply charges.*

*FURTHER RESOLVED THAT Director (Admin & HR), KPTCL be and is hereby authorized to take further needful action, accordingly.*

6. ಮಂಡಳಿ ಸಭೆಯ ನಿರ್ಣಯದಂತೆ ಈ ಕೆಳಕಂಡಂತೆ ಆದೇಶಿಸಲಾಗಿದೆ.

**ಕವಿಪ್ರನಿನಿ/ಆದೇಶ ಸಂಖ್ಯೆ: ಬಿ9/68288/17-18/ಬೆಂಗಳೂರು** ದಿನಾಂಕ 09 NOV 2022

ದಿನಾಂಕ 23/08/2022 ರ 134 ನೇ ಕವಿಪ್ರನಿನಿ ಮಂಡಳಿ ನಿರ್ದೇಶಕರ ಸಭೆಯ ನಡವಳಿಯನ್ವಯ ಬೆಳಗಾವಿ ಜಿಲ್ಲೆ, ರಾಯಬಾಗ್ ತಾಲ್ಲೂಕು, ಕುಡಚಿ 110ಕೆ.ವಿ. ಉಪಕೇಂದ್ರದ ಆವರಣದಲ್ಲಿ ಹೆಸ್ಕಾಂ ನ ನೂತನ ಉಪವಿಭಾಗ ಕಚೇರಿ ಕಟ್ಟಡವನ್ನು ನಿರ್ಮಿಸಲು 25 X 30 ಮೀಟರ್ ಅಳತೆಯ ಖಾಲಿ ಜಾಗವನ್ನು ಕವಿಪ್ರನಿನಿ ಮತ್ತು ಎಸ್ಕಾಂ ಗಳ ನಡುವೆ ಚಾಲ್ತಿಯಲ್ಲಿರುವ Arms-length arrangement ರನ್ವಯ, ಹೆಸ್ಕಾಂ ಗೆ 30 ವರ್ಷಗಳ ಲೀಸ್ ಆಧಾರದ ಮೇಲೆ ನೀಡಲು ಹಾಗೂ ಹೆಸ್ಕಾಂ ನಿಂದ ಕವಿಪ್ರನಿನಿ ಕಟ್ಟಡಗಳ ಬಾಡಿಗೆ, ನಿರ್ವಹಣೆ ವೆಚ್ಚ, ನೀರು ಸರಬರಾಜು ವೆಚ್ಚಗಳ ಎಲ್ಲಾ ಬಾಕಿ ಮೊತ್ತಗಳನ್ನು ಪಾವತಿಸಿರುವುದನ್ನು ದೃಢೀಕರಿಸಿಕೊಳ್ಳಲು ಆದೇಶಿಸಲಾಗಿದೆ.

ಈ ಹಿನ್ನೆಲೆಯಲ್ಲಿ, ಬೆಳಗಾವಿ ಜಿಲ್ಲೆ, ರಾಯಬಾಗ್ ತಾಲ್ಲೂಕು, ಕುಡಚಿ 110ಕೆ.ವಿ. ಉಪಕೇಂದ್ರದ ಆವರಣದಲ್ಲಿ ಹೆಸ್ಕಾಂ ಗೆ ಈ ಕೆಳಕಂಡ ಷರತ್ತುಗಳನ್ವಯ ಲೀಸ್ ಆಧಾರದ ಮೇಲೆ ಸದರಿ ಜಾಗವನ್ನು ನೀಡಲು ಕೂಡಲೆ ಅಗತ್ಯ ಕ್ರಮಕೈಗೊಳ್ಳುವಂತೆ ಮುಖ್ಯ ಇಂಜಿನಿಯರ್ (ವಿ), ಪ್ರಸರಣ ವಲಯ, ಬಾಗಲಕೋಟೆ ರವರಿಗೆ ನಿರ್ದೇಶನ ನೀಡಲಾಗಿದೆ.

1. ಹೆಸ್ಕಾಂ ಕೋರಿಕೆಯನ್ವಯ ಬೆಳಗಾವಿ ಜಿಲ್ಲೆ, ರಾಯಬಾಗ್ ತಾಲ್ಲೂಕು, ಕುಡಚಿ 110ಕೆ.ವಿ. ಉಪಕೇಂದ್ರದ ಆವರಣದಲ್ಲಿ ಮುಖ್ಯ ಇಂಜಿನಿಯರ್ (ವಿ), ಪ್ರಸರಣ ವಲಯ, ಬಾಗಲಕೋಟೆ ರವರ ಪ್ರಸ್ತಾವನೆಯಲ್ಲಿನ ನಕಾಶೆಯಲ್ಲಿ ಗುರುತಿಸಿರುವಂತೆ ಹೆಸ್ಕಾಂ ನ ನೂತನ ಉಪವಿಭಾಗ ಕಚೇರಿ ಕಟ್ಟಡಗಳನ್ನು ನಿರ್ಮಿಸಲು 25 X 30 ಮೀಟರ್ ಅಳತೆಯ ನಿಗಮದ ಜಾಗವನ್ನು 30 ವರ್ಷಗಳ ಲೀಸ್ ಆಧಾರದ ಮೇಲೆ ಹಸ್ತಾಂತರಿಸುವ ಮುನ್ನ ಹೆಸ್ಕಾಂ ನಿಂದ ಬಾಗಲಕೋಟೆ ಪ್ರಸರಣ ವಲಯ ವ್ಯಾಪ್ತಿಯಲ್ಲಿ ಕವಿಪ್ರನಿನಿ ಕಟ್ಟಡಗಳ ಬಾಡಿಗೆ, ನಿರ್ವಹಣೆ ವೆಚ್ಚ, ನೀರು ಸರಬರಾಜು ವೆಚ್ಚ ಹಾಗೂ ಲೀಸ್ ಮೊತ್ತಗಳ ಬಾಕಿ ಮೊತ್ತಗಳನ್ನು ಪಾವತಿಸಲಾಗಿರುವುದನ್ನು ಮುಖ್ಯ ಇಂಜಿನಿಯರ್ (ವಿ), ಪ್ರಸರಣ ವಲಯ, ಬಾಗಲಕೋಟೆ ರವರು ದೃಢೀಕರಿಸಿಕೊಳ್ಳುವುದು.

2. ಸದರಿ ಜಾಗವನ್ನು ಹೆಸ್ಕಾಂ ಗೆ ನೀಡುವ ಸಂಬಂಧ ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಟಿಎಲ್ ಮತ್ತು ಎಸ್‌ಎಸ್ ವಿಭಾಗ, ಚಿಕ್ಕೋಡಿ ರವರು ಹೆಸ್ಕಾಂನೊಂದಿಗೆ ಲೀಸ್ ಒಪ್ಪಂದ ಮಾಡಿಕೊಳ್ಳುವುದು.

3. ಸದರಿ ಜಾಗವನ್ನು ಹಾಲಿ ಮಾರ್ಗಸೂಚಿ ಬೆಲೆಯನ್ವಯ ಹಾಗೂ ಕವಿಪ್ರನಿನಿ ಮತ್ತು ಎಸ್ಕಾಂ ಗಳ ನಡುವೆ ಹಾಲಿ ಇರುವ Arms-length arrangement ನ ನಿಯಮಗಳಂತೆ, ವಾರ್ಷಿಕ ಲೀಸ್ ಮೊತ್ತವನ್ನು ಲೆಕ್ಕಾಚಾರ ಮಾಡಿ ಪಾವತಿಸುವಂತೆ, ಹೆಸ್ಕಾಂ ಗೆ ಸೂಚಿಸುವುದು.

4. ಸದರಿ ಲೀಸ್ ಮೊತ್ತವನ್ನು ಪ್ರತಿ 5 ವರ್ಷಗಳಿಗೊಮ್ಮೆ, ಅಂದಿನ ಮಾರ್ಗಸೂಚಿ ಬೆಲೆಯನ್ವಯ ಹಾಗೂ Arms-length arrangement ನ ನಿಯಮಗಳನ್ವಯ, ಪರಿಷ್ಕರಿಸುವುದು. ಹಾಗೂ ವಾರ್ಷಿಕ ಲೀಸ್ ಮೊತ್ತವನ್ನು, ಪ್ರತಿ ವರ್ಷ ಏಪ್ರಿಲ್ ಮಾಹೆಯ ಮೊದಲ ವಾರದಲ್ಲಿ, ಮುಂಗಡವಾಗಿ ಚಿಕ್ಕೋಡಿ, ಟಿಎಲ್ ಮತ್ತು ಎಸ್‌ಎಸ್ ವಿಭಾಗಕ್ಕೆ, ಪಾವತಿಸುವಂತೆ ಹೆಸ್ಕಾಂ ಗೆ ಸೂಚಿಸುವುದು.

5. ಹೆಸ್ಕಾಂ ಗೆ ನೀಡಲು ಅನುಮೋದಿಸಿರುವ ಜಾಗಗಳನ್ನು, ಉದ್ದೇಶಿತ ಕಟ್ಟಡಗಳ ನಿರ್ಮಾಣಕ್ಕೆ ಮಾತ್ರ ಉಪಯೋಗಿಸುವಂತೆ ಹಾಗೂ ಬೇರೆ ಯಾವುದೆ ಉದ್ದೇಶಕ್ಕೆ ಬಳಸಬಾರದೆಂಬ, ಷರತ್ತನ್ನು ವಿಧಿಸುವುದು.

6. ಹೆಸ್ಕಾಂ ಗೆ ನೀಡಲು ಅನುಮೋದಿಸಿರುವ ಜಾಗದ ಕರಾರು ಒಪ್ಪಂದ ಮಾಡಿಕೊಂಡ ದಿನದಿಂದ, ಒಂದು ವರ್ಷದ ಅವಧಿಯೊಳಗೆ, ಉದ್ದೇಶಿತ ಕಟ್ಟಡಗಳ ನಿರ್ಮಾಣಕ್ಕೆ ಕ್ರಮಕೈಗೊಳ್ಳುವಂತೆ ತಿಳಿಸುವುದು, ಇಲ್ಲವಾದ್ದಲ್ಲಿ, ಒಪ್ಪಂದದ ಕರಾರು ರದ್ದಾಗುವುದೆಂಬ ಷರತ್ತನ್ನು ವಿಧಿಸುವುದು.

7. ನಿಗಮ ಲೀಸ್ ನೀಡಲು ಅನುಮೋದಿಸಿರುವ ಜಾಗವನ್ನು ಒತ್ತುವರಿಯಾಗದಂತೆ ಸಂರಕ್ಷಿಸಿಕೊಳ್ಳಲು ಸೂಕ್ತ ಕ್ರಮಕೈಗೊಳ್ಳಲು ಹೆಸ್ಕಾಂ ಗೆ ಸೂಚಿಸುವುದು.

8. ಲೀಸ್ ಆಧಾರದ ಮೇಲೆ ಹೆಸ್ಕಾಂ ಗೆ ನೀಡಲು ಅನುಮೋದಿಸಿರುವ ಜಾಗದ ಬಗ್ಗೆ, ಟಿಎಲ್ ಮತ್ತು ಎಸ್‌ಎಸ್ ವಿಭಾಗದ ಆಸ್ತಿ ಪುಸ್ತಕದಲ್ಲಿ, ಅಗತ್ಯ ದಾಖಲಾತಿಗಳನ್ನು ಮಾಡುವುದು.

9. ಹೆಸ್ಕಾಂ ಗೆ ನೀಡಲು ಅನುಮೋದಿಸಿರುವ ಜಾಗದ ಬಗ್ಗೆ ನಿಗಮದ ದಿನಾಂಕ 29/04/2005 ರ ಆದೇಶ ಹಾಗೂ 26/10/2006 ಸುತ್ತೋಲೆಯಲ್ಲಿ ತಿಳಿಸಿರುವ Arms-length arrangement ನ ನಿಯಮಗಳನ್ವಯ ಮುಂದಿನ ಅಗತ್ಯ ಕ್ರಮಕೈಗೊಳ್ಳುವುದು.

**ಆದೇಶದ ಮೇರೆಗೆ**

**ನಿರ್ದೇಶಕರು (ಆ ಮತ್ತು ಮಾ.ಸಂ)**
**ಕವಿಪ್ರನಿನಿ, ಬೆಂಗಳೂರು.**

**ಪ್ರತಿಗಳು:-**

1. ವ್ಯವಸ್ಥಾಪಕ ನಿರ್ದೇಶಕರು, ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ, ಹುಬ್ಬಳ್ಳಿ.
2. ಮುಖ್ಯ ಇಂಜಿನಿಯರ್ (ವಿ), ಪ್ರಸರಣ ವಲಯ, ಕವಿಪ್ರನಿನಿ, ಬಾಗಲಕೋಟೆ.
3. ಮುಖ್ಯ ಇಂಜಿನಿಯರ್ (ವಿ), (ಕಾ ಮತ್ತು ಪಾ) ಬೆಳಗಾವಿ ವಲಯ, ಹೆಸ್ಕಾಂ, ಬೆಳಗಾವಿ.
4. ಆರ್ಥಿಕ ಸಲಹೆಗಾರರು (ಲೆ ಮತ್ತು ಸಂ) /(ಆಂತರಿಕ ಪರಿಶೋಧನೆ), ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.
5. ಕಂಪನಿ ಕಾರ್ಯದರ್ಶಿ, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.
6. ಅಧೀಕ್ಷಕ ಇಂಜಿನಿಯರ್ (ವಿ), ಪ್ರಸರಣ (ಕಾ ಮತ್ತು ನಿ) ವೃತ್ತ, ಕವಿಪ್ರನಿನಿ, ಬೆಳಗಾವಿ.
7. ಅಧೀಕ್ಷಕ ಇಂಜಿನಿಯರ್ (ಸಿವಿಲ್), ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.
8. ಅಧೀಕ್ಷಕ ಇಂಜಿನಿಯರ್ (ಸಿವಿಲ್), ಹೆಸ್ಕಾಂ, ನಿಗಮ ಕಾರ್ಯಾಲಯ, ಹುಬ್ಬಳ್ಳಿ.
9. ಅಧೀಕ್ಷಕ ಇಂಜಿನಿಯರ್ (ವಿ), (ಐಟಿ ಮತ್ತು ಎಂಐಎಸ್) – ನಿಗಮದ ಅಂತರ್ಜಾಲದಲ್ಲಿ ಪ್ರಕಟಿಸಲು
10. ಲೆಕ್ಕ ನಿಯಂತ್ರಣಾಧಿಕಾರಿ, ಪ್ರಸರಣ ವಲಯ, ಕವಿಪ್ರನಿನಿ, ಬಾಗಲಕೋಟೆ.
11. ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಟಿಎಲ್ ಮತ್ತು ಎಸ್‌ಎಸ್ ವಿಭಾಗ, ಕವಿಪ್ರನಿನಿ, ಚಿಕ್ಕೋಡಿ.
12. ಕಾರ್ಯನಿರ್ವಾಹಕ ಇಂಜಿನಿಯರ್ (ಸಿವಿಲ್), ಪ್ರಸರಣ ವಲಯ, ಕವಿಪ್ರನಿನಿ, ಬಾಗಲಕೋಟೆ..
13. ಉಪಲೆಕ್ಕ ನಿಯಂತ್ರಣಾಧಿಕಾರಿ (ಆಂತರಿಕ ಪರಿಶೋಧನೆ), ಪ್ರಸರಣ ವಲಯ, ಕವಿಪ್ರನಿನಿ, ಬಾಗಲಕೋಟೆ.
14. ವ್ಯವಸ್ಥಾಪಕ ನಿರ್ದೇಶಕರು/ ನಿರ್ದೇಶಕರು (ಪ್ರಸರಣ)/ ನಿರ್ದೇಶಕರು (ಹಣಕಾಸು)/ ನಿರ್ದೇಶಕರು (ಆ ಮತ್ತು ಮಾ. ಸಂ) ರವರುಗಳ ಹಿರಿಯ ಆಪ್ತ ಕಾರ್ಯದರ್ಶಿಗಳು, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.
15. ಲೆಕ್ಕಾಧಿಕಾರಿ (ಕೋಡೀಫಿಕೇಷನ್), ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.